ಕೊಡಗಂ ಜಿಲ್ಲೆಯಲ್ಲಿ ಹಾಲು ವಂತಸ್ಥರೆಂದಂ ವಾಡಿಕೆಯಂ ಹೆಸರಂ ಪಡೆದಿರಂವ ಕಂರಂಬ ಜನಾಂಗದವರಿಗೆ ಪರಿಶಿಷ್ಟ ವರ್ಗದ ಸೌಲಭ್ಯಗಳನ್ನು ವಿಸ್ತರಿಸಂವ ಬಗ್ಗೆ.

೧೦೫೬ (ಅ). ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಮಾಜ ಕಲ್ಯಾಣ ವಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗು ಜಿಲ್ಲೆಯಲ್ಲಿ ಹುಟ್ಟಿ ಬೆಳೆದು ಬದುಕು ನಡೆಸಂತ್ತಿರಂವ ಕುರಂಬ ಜನಾಂಗದವರನ್ನು ಪರಿಶಿಷ್ಟ ವರ್ಗವೆಂದು (ಗಿರಿಜನ) ಸರ್ಕಾರದವರು ಪರಿಗಣಿಸಿ ಎಲ್ಲಾ ಸರ್ಕಾರಿ ಸೌಲತ್ತುಗಳನ್ನು ಕೊಡಲು ಆದೇಶ ನೀಡಿರುವುದು ನಿಜವಲ್ಲವೆ ?

ಆ) ಅದೇ ಕೊಡಗಂ ಜಿಲ್ಲೆಯ ಕುರಂಬ ಜನಾಂಗದ ವಂತ್ತೊಂದಂ ವಾಡಿಕೆಯಂ ಹೆಸರಾದ ಹಾಲಂ ವಂತದವರನ್ನು ಸಹ ಗಿರಿಜನರೆಂದು ಪರಿಗಣಿಸಿ ಎಲ್ಲಾ ಸರ್ಕಾರಿ ಸವಲತ್ತುಗಳನ್ನು ವಿಸ್ತರಿಸಿರುವುದಂ ನಿಜವಲ್ಲವೆ ?

ಇ) ಹಾಗಿದ್ದಲ್ಲಿ ಹಾಲಂಮತ ಕುರಂಬರಿಗೆ ಗಿರಿಜನರೆಂದಂ ದೃಢೀಕರಣ ಪತ್ರ ಕೊಡುವಲ್ಲಿ ಸಂಬಂಧಪಟ್ಟ ಅಧಿಕಾರಿಗಳಂ ಕಿರುಕುಳ ನೀಡುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸರಕಾರದವರು ಸೂಕ್ತ ನಿರ್ದೇಶನ ನೀಡಲಂ ಇರುವ ಅಡಚಣೆಗಳೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಭಾರತ ಸರ್ಕಾರದ ಸಂವಿಧಾನದನ್ವಯ ರಾಷ್ಟ್ರಾಧ್ಯಕ್ಷರು ಹೊರಡಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆದೇಶದ ಪ್ರಕಾರ ಕೊಡಗು ಜಿಲ್ಲೆಯ ಮೂಲ ನಿವಾಸಿಗಳಾದ 'ಕುರುಂಬ' ಜನಾಂಗವನ್ನು ಪರಿಶಿಷ್ಟ ವರ್ಗವೆಂದು ಪರಿಗಣಿಸಲಾಗಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಅಗತ್ಯವಿಲ್ಲ.

ದರಖಾಸ್ತು ಭೂಮಿ ಹಂಚಿಕೆಯ ಬಗ್ಗೆ

೯೩೧. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).— ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸದುರ್ಗ ತಾಲ್ಲೂಕು, ನಾತೋಡು ಹೋಬಳಿ ಕಾಂಚೀಪುರ ಹಳ್ಳಿಯಲ್ಲಿ ಸ.ನಂ. ೧೨೨ ರಲ್ಲಿ ಎಷ್ಟು ವಂದಿಗೆ ದರಖಾಸ್ತು ಭೂಮಿ ಹಂಚಲಾಗಿದೆ;

ಆ) ಸರ್ಕಾರದವರು ಈ ಭೂಮಿಯನ್ನು ಹಂಚಿ ಎಷ್ಟು ವರ್ಷವಾಯಿತು ಮತ್ತು ಇವರುಗಳಿಗೆ ಸಾಗುವಳಿ ಚೀಟಿ ಕೊಡಲಾಗಿದೆಯೇ;

ಇ) ಸರ್ಕಾರದವರು ಇದುವರೆಗೆ ದರಖಾಸ್ತು ಜಮೀನಿನಲ್ಲಿ ವ್ಯವಸಾಯ ಮಾಡಂತ್ತಿರುವ ಈ ರೈತರಿಗೆ ಅವರವರ ಜಮೀನಂಗಳನ್ನು ಅಳತೆ ಮಾಡಿ ಕೊಡದಿರಲು ಕಾರಣವೇನಂ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ವಂತ್ರಿಗಳು).—

ಅ) ೫೮.

ಆ) ೧೯೬೪,೧೯೬೮ ವಂತ್ತು ೧೯೧೧ರಲ್ಲಿ ಭೂಮಿಯಂನ್ನು ಹಂಚಲಾಗಿದೆ. ೫೮ ಜನರಲ್ಲಿ ೨೮ ಜನರಿಗೆ ಈಗಾಗಲೇ ಸಾಗುವಳಿ ಚೀಟಿ ಕೊಡಲಾಗಿದೆ. ಕಿಮ್ಮತ್ತು ಬಾಂಧಫಿ ವಗೈರೆ ಪಾವತಿ ಮಾಡದ ೩೦ ಜನರಿಗೆ ಸಾಗುವಳಿ ಚೀಟಿ ಕೊಡಲಾಗಿಲ್ಲ.

ಇ) ಕಿವಂತ್ತು ವಂತ್ತು ಬಾಂಧಫಿ ಇತ್ಯಾದಿ ಕಟ್ಟದೆ ಇದ್ದ ಕಾರಣ ಅಳತೆ ಮಾಡಿಲ್ಲ.